THE MYSORE LEGISLATIVE ASSEMBLY

SIXTY-FOURTH DAY

Tuesday, 29th August, 1961.

The House met in the Assembly Hall, Vidhana Soudha, Bangalore, at One of the Clock.

Mr. SPEAKER (Sri S. R. KANTHI, B.A., LL.B.) in the Chair.

STARRED QUESTIONS

(to which oral answers were given)

TRANSFER OF THE LAND BELONGING TO HALEBIDU AND CHEEKANAHALLY VILLAGES FROM THE CONTROL OF REVENUE DEPARTMENT TO THAT OF AGRICULTURAL DEPARTMENT.

*Q.—707. Sri M. K. BOMME GOWDA (Krishnarajapet).—

Will the Government be pleased to state:—

(*a*) whether it is a fact that the land bearing S. No. 114 belonging to Halebidu and Cheekanahally villages, Melkote Hobli, Pandavapura Taluk, has been transferred from the control of the Revenue Department to that of the Agricultural Department;

(*b*) whether the land was being cultivated before the transfer stated above was made and if so, since when

(*c*) how the land is being made use of by the Agricultural Department at present;

(*d*) whether it is under their consideration to give the land to the ryots who were cultivating the same previously?

*A.—Sri KADIDAL MANJAPPA (Minister for Revenue):—

(*a*) Yes.

(*b*) No.

(*c*) For establishing a Seed Multiplication Farm.

(*d*) Does not arise in the light of the answer to (*b*) above.

ಶ್ರೀ ಎಂ. ಕೆ. ಬೊಮ್ಮಗೌಡ.—(ಎ) ಪ್ರಶ್ನೆಗೆ ಉತ್ತರವಾಗಿ ಹೇಳಿರುವಂತೆ ಈ ಜಮೀನನ್ನು ವ್ಯವಸಾಯದ ಇಲಾಖೆಗೆ ವಹಿಸಿದಾಗ ಇದು ವ್ಯವಸಾಯಕ್ಕಾಗಿ ಉಪಯೋಗಿಸಲ್ಪಡುತ್ತಿತ್ತೆ ಅಥವ ಬಂಜರಾಗಿತ್ತೆ?

†ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ವರದಿಯಾಗಿರುವ ಪ್ರಕಾರ ಇದನ್ನು ಯಾರೂ ಸಾಗುವಳಿ ಕೊಡುತ್ತಿರಲಿಲ್ಲ.

---

†Indicates that the remarks or speeches have not been revised by be Member concerned.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸಾಗುವಳಿ ಮಾಡುತ್ತಿದ್ದರೆಂದು ವರದಿ ಬಂದರೆ ಸಾಗವಳಿದಾರರಿಗೆ ಈ ಜಮೀನನ್ನು ವಾಪಸ್ಸು ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಟ್ಯಾಂಕ್ ಬೆಡ್‌ನಲ್ಲಿ ಯಾರಿಗೂ ಹಕ್ಕಿಲ್ಲದಿರುವುದರಿಂದ ಇದನ್ನು ವ್ಯವಸಾಯದ ಇಲಾಖೆಗೆ ಕೊಡಲಾಗಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—10–15 ವರ್ಷಗಳಿಂದ ಈ ಜಮೀನು ಸಾಗುವಳಿಯಾಗುತ್ತಿತ್ತು, 10–15 ಕುಟುಂಬಗಳು ಇದರಿಂದ ಜೀವನ ಮಾಡುತ್ತಿದ್ದರು ಎಂಬುದು ಸರ್ಕಾರದ ಅವಗಾಹನೆಗೆ ಬಂದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ ಎಂದು ವರದಿಯಾಗಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ವಿಚಾರದಲ್ಲಿ ಎಷ್ಟೋ ಸಲ ಸಂಬಂಧಪಟ್ಟವರು ಅರ್ಜಿ ಕೊಟ್ಟಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಕೊಟ್ಟಿದ್ದಾರೆ. ಆವರಿಗೆ ಇದು ರಿಸರ್ವ್ ಟ್ಯಾಂಡ್ ಟ್ಯಾಂಕ್ ಬೆಡ್, ಇದನ್ನು ಕೊಡುವುದಕ್ಕಾಗುವುದಿಲ್ಲ ಎಂದು ತಿಳಿಸಿ ವ್ಯವಸಾಯದ ಇಲಾಖೆಗೆ ಸೀಡ್ ಫಾರಂಗಾಗಿ ಬೇಕಾಗಿದ್ದುದರಿಂದ ಆ ಇಲಾಖೆಗೆ ಕೊಟ್ಟಿದ್ದೇವೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಅರ್ಜಿದಾರರು ಸಾಗುವಳಿ ಮಾಡುತ್ತಿದ್ದರೂ ಅವರನ್ನು ಬಿಡಿಸಿ ಸೀಡ್ ಫಾರಂಗೆ ಈ ಜಮೀನನ್ನು ಕೊಟ್ಟಿದ್ದಾರೆಂದು ದೂರು ಕೊಟ್ಟಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಆ ದೂರೂ ನ್ಯಾಯವಲ್ಲ ಎಂದು ಅಧಿಕಾರಿಗಳು ವರದಿ ಮಾಡಿದ್ದಾರೆ.

Sri Y. VEERAPPA.—What is the extent of land handed over to the Agricultural Department?

Sri KADIDAL MANJAPPA.—46 acres and 5 gunthas.

Sri Y. VEERAPPA.—Is there any natural water source available for the Seed Farm?

Sri KADIDAL MANJAPPA.—They have found it suitable for a seed farm.

ಶ್ರೀ ಎಂ. ಕೆ. ಬೊಮ್ಮೇಗೌಡ.—10–15 ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದರೂ ಇನಾಂ ಜಮೀನು ಆದ ಮೇಲೆ ಇನಾಂದಾರರು ರೈತರ ಮೇಲಿನ ದ್ವೇಷದಿಂದ ಡೆಪ್ಯುಟಿ ಕಮಿಷನರಿಗೆ ಹೇಳಿ ರೈತರಿಂದ ಈ ಜಮೀನನ್ನು ತಪ್ಪಿಸಿ ಸೀಡ್ ಫಾರಂಗೆ ಕೊಡಿಸಿದ್ದಾರೆಂಬುದು ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಟ್ಯಾಂಕ್ ಬೆಡ್‌ನಲ್ಲಿ ರೈತರಿಗೆ ಹಕ್ಕಿರುವುದಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಇನಾಂದಾರರು ಮೊದಲು ಈ ಜಮೀನು ವ್ಯವಸಾಯ ಮಾಡುವವರಿಂದ ಹೆಚ್ಚು ಹಣ ವಸೂಲು ಮಾಡುತ್ತಿದ್ದರು. ರೈತರು ತಮ್ಮ ವಶಕ್ಕೆ ಜಮೀನು ಬಂದ ಮೇಲೆ ಕೊಡುತ್ತಿದ್ದುದನ್ನು ಕಡಮೆ ಮಾಡಿಸಿಕೊಂಡುದರಿಂದ ಇನಾಂದಾರರು ದ್ವೇಷದಿಂದ ಡೆಪ್ಯುಟಿ ಕಮಿಷನರ ಮೂಲಕ ಇದನ್ನು ವ್ಯವಸಾಯದ ಇಲಾಖೆಗೆ ಕೊಡುವಂತೆ ಶಿಫಾರ್ಸು ಮಾಡಿಸಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಜಿ ಕೊಟ್ಟಾಗ ಹಕ್ಕಿರುವ ಬಗ್ಗೆ ಯಾವ ದಾಖಲೆಯನ್ನೂ ಹಾಜರು ಮಾಡಲಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ವ್ಯವಸಾಯದ ಇಲಾಖೆಗೆ ವಹಿಸಿದ ಮೇಲೆ ಸೀಡ್ ಫಾರಂ ಆಗಿದೆಯೆ ಎಂದು ವಿಚಾರಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ ವಹಿಸಿದೆ; ನೋಟೀಸ್.

Sri G. N. PUTTANNA.—If the land belongs to the Jodidar, it must bear the Account Numbers 14 and 15. In the absence of it, if it is Government land, there must be takrar takhtas. In the absence of these records, it must belong to Government and it amounts to unauthorised cultivation. Is Government going to take any action against unauthorised cultivation?

Sri KADIDAL MANJAPPA.—The land has been handed over to the Agricultural Department. They are in possession of it now.

ಶ್ರೀ ಎಂ. ಕೆ. ಬೊಮ್ಮೇಗೌಡ.—ರೈತರಿಂದ ತಪ್ಪಿಸಿದ ಮೇಲೆ ಯಾವ ಉದ್ದೇಶಕ್ಕಾಗಿ ವ್ಯವಸಾಯದ ಇಲಾಖೆಗೆ ವಹಿಸಲ್ಪಟ್ಟಿದೆಯೋ ಆ ಉದ್ದೇಶ ನೆರವೇರಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ಇಲಾಖೆಯವರು ಫಾರಂ ಮಾಡುವ ತರದೂರಿನಲ್ಲಿದ್ದಾರೆಂದು ಭಾವಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ರೈತರು ತಾವು ಖುದ್ದಾಗಿ ಸಾಗುವಳಿ ಮಾಡುತ್ತಿರುವುದಾಗಿ ಅರ್ಜಿ ಕೊಟ್ಟ ಮೇಲೆ ವಾಸ್ತವವಾಗಿ ಆ ರೀತಿ ಮಾಡುತ್ತಿರುವರೆ, ಇಲ್ಲವೆ ಎಂದು ತನಿಖೆ ಮಾಡಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗು ಡೆಪ್ಯುಟಿ ಕಮಿಷನರಿಂದ ವರದಿ ತರಿಸಲಾಗಿದೆ. ಅದರ ಪ್ರಕಾರ ಆ ರೈತರಿಗೆ ಹಕ್ಕಿಲ್ಲವೆಂದು ತಿಳಿದು ಬಂದಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ನುಮಾರು 50 ರೈತರು ಬಂದು ಈ ಜಮೀನು ತಮ್ಮ ಹಿಡುವಳಿಯಲ್ಲಿದೆ, ತಾವು ಸಾಗುವಳಿ ಮಾಡುತ್ತಿದ್ದೇವೆ ಎಂದು ಅರ್ಜಿ ಕೊಟ್ಟಮೇಲೆ ತನಿಖೆ ಮಾಡಿಸಿ ಅವರು ಹೇಳಿವುದು ಸತ್ಯವೆ, ಅಲ್ಲವೆ ಎಂಬುದನ್ನು ತಿಳಿದುಕೊಳ್ಳಲಾಯಿತೆ?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಜಿ ಕೊಟ್ಟ ಮೇಲೆ ವರದಿ ತರಿಸಿದ್ದೇವೆ.

ಶ್ರೀ ಬಿ. ಚಾಮಯ್ಯ.—ಈ ಜಮೀನನ್ನು ಸರ್ಕಾರಿ 'ಸೀಡ್ ಫಾರಂ' ಮಾಡಬೇಕೆಂದು ವ್ಯವಸಾಯ ಇಲಾಖೆಯ ಸ್ವಾಧೀನಕ್ಕೆ ಕೊಟ್ಟಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗಿದು.

ಶ್ರೀ ಬಿ. ಚಾಮಯ್ಯ.—ಕೊಟ್ಟನಂತರ ವ್ಯವಸಾಯ ಇಲಾಖೆಯವರು ಅಲ್ಲಗೆ ಹೋಗಿ ಸರ್ವೆ ಮಾಡಿ ಆ ಜಮೀನನ್ನು ನಫರ್ದಿಗೆ ತೆಗೆದುಕೊಂಡು ಅಲ್ಲಗೆ ಒಬ್ಬ ವ್ಯವಸಾಯ ಇನ್‌ಸ್ಪೆಕ್ಟರನ್ನು ನೇಮಕ ಮಾಡಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಜಿ. ಎಸ್. ಪುಟ್ಟಣ್ಣ.—ಸರ್ವೆ ಆಗಿ, ಜೋಡಿ ಗ್ರಾಮಗಳು ಸರ್ಕಾರದ ಅಧೀನಕ್ಕೆ ಬಂದಮೇಲೆ ಜೋಡಿದಾರರು ರೈತರಿಂದ ಹಣ ತೆಗೆದುಕೊಂಡು ಆ ಜಮೀನನ್ನು ರೈತರ ಸ್ವಾಧೀನ ಮಾಡಬೇಕೆಂಬ ಉದ್ದೇಶದಿಂದ ಹೀಗೆ ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

(ಉತ್ತರವಿಲ್ಲ)

ಶ್ರೀ ಎಂ. ಕೆ. ಬೊಮ್ಮೇಗೌಡ.—ಇನಾಂ ಪದ್ಧತಿಯ ಪ್ರಕಾರ ರೈತರು ವ್ಯವಸಾಯ ಮಾಡುತ್ತಿದ್ದರು. ಇನಾಂ ರದ್ದಾದ ಮೇಲೆ, ಇನಾಂ ಗ್ರಾಮದ ಜಮೀನು ಸರ್ಕಾರದ ಅಧೀನಕ್ಕೆ ಬಂದಮೇಲೆ ಆ ರೈತರಿಗೆ ಯಾವ ನೋಟೀಸನ್ನೂ ಕೊಡದೆ, ಅವರಿಗೆ ತಿಳುವಳಿಕೆಯನ್ನೂ ಕೊಡದೆ ಇದ್ದಕ್ಕಿದ್ದ ಹಾಗೆ ಆ ಜಮೀನನ್ನೂ ವ್ಯವಸಾಯ ಇಲಾಖೆಗೆ ಕೊಟ್ಟದ್ದು ನ್ಯಾಯವೆ?

ಶ್ರೀ ಕಡಿದಾಳ್ ಮಂಜಪ್ಪ.—ರೈತರು ಸ್ವಾಧೀನದಲ್ಲಿರಲಿಲ್ಲ ; ಅದು ಸರ್ಕಾರಿ ಜಮೀನಾದ್ದರಿಂದ ಸೀಡ್ ಫಾರಮಿಗಾಗಿ ವ್ಯವಸಾಯ ಇಲಾಖೆಗೆ ಕೊಟ್ಟಿದ್ದೇವೆ. ನುಮಾರು ಐವತ್ತು ಜನ ಆ ಜಮೀನನ್ನು ಸಾಗುವಳಿಗಾಗಿ ತಮಗೆ ಕೊಡಬೇಕೆಂದು ಕೊಟ್ಟಿದಾರೆ ಅಷ್ಟೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಡೆಪ್ಯುಟಿ ಕಮೀಷನರು ತಮ್ಮ ವರದಿಯಲ್ಲಿ ಪಹಣಿ ಎಕ್ಸ್ಟ್ರಾಕ್ಟ್ ಕೊಟ್ಟಿದ್ದರೆ ಅದರಿಂದ ಗೊತ್ತಾಗಲಲ್ಲವೆ ಅದು ರೈತರಿಗೆ ಸೇರಿದ್ದೆ ಹೇಗೆ ಎಂಬುದು?

ಶ್ರೀ ಕಡಿದಾಳ್ ಮಂಜಪ್ಪ.—ರೈತರು ಆ ಜಮೀನು ತಮ್ಮದೆಂಬ ಬಗ್ಗೆ ಏನಾದರೂ ದಾಖಲಾವತಿ ಕೊಟ್ಟಿದ್ದಿದ್ದರೆ ವಿಚಾರ ಮಾಡಬಹುದಾಗಿತ್ತು, ಆದರೆ ಅಂಥ ಯಾವುದನ್ನೂ ಅವರು ಕೊಟ್ಟಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಅನೇಕ ಮುಖಂಡರೂ ಮಂತ್ರಿಗಳೂ ರೈತರು ವ್ಯವಸಾಯ ಮಾಡುತ್ತಿದ್ದುದನ್ನು ನೋಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಅದನ್ನು ಇನ್ಸ್ಪೆಕ್ಟ್ ಮಾಡದೆ ಈ ರೀತಿ ವರದಿ ಮಾಡಿ ಹಾಗೆ ಮಾಡಿದರೆ ಆ ರೈತರು ಯಾರನ್ನು ಕೇಳಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೈತರು ಆ ಜಮೀನನ್ನು ಸಾಗುವಳಿ ಮಾಡುತ್ತಿದ್ದರೆಂಬುದಕ್ಕೆ ಯಾವ ದಾಖಲೆಯೂ ಇಲ್ಲ, ನಮ್ಮನೆ ಬಾಯಲ್ಲಿ ಹೇಳಿದರೆ ಹೇಗೆ ?

ಶ್ರೀ ಬಿ. ಚಾಮಯ್ಯ.—ಅವರು ಸಾಗುವಳಿ ಮಾಡುವುದಕ್ಕೆ ಸರ್ಕಾರದವರು ಅನುಮತಿ ಕೊಟ್ಟಿದ್ದರೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಮೊದಲು ಇನಾಂ ಜಮೀನಾಗಿತ್ತು. ಆಗಿನ ಕಾನೂನು ಪ್ರಕಾರ ರೈತರು ಆ ಜಮೀನನ್ನು ಸಾಗುವಳಿ ಮಾಡುತ್ತಿದ್ದರು. ಇನಾಂ ರದ್ದಾದಮೇಲೆ ಈಗ ಇದ್ದಕ್ಕಿದ್ದ ಹಾಗೆ ಹೀಗೆ ಮಾಡಬಹುದೆ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದೇನೋ ಬಹಳ Controvercial ಎಂದು ಕಾಣುತ್ತದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ತನಿಖೆ ಮಾಡಿ ನ್ಯಾಯ ದೊರಕಿಸುತ್ತೀರಾ ?

(ಉತ್ತರವಿಲ್ಲ)

RESOLUTIONS PASSED BY THE KHANAPUR AND BELGAUM DEVELOPMENT BOARD.

*Q.—710. Sri N. O. SAMAJI (Belgaum II).—

Will the Government be pleased to state :—

(*a*) whether they are aware of the resolution passed by the Khanapur and Belgaum Development Board to the effect that the border issue be solved on the basis of village as a unit and its contiguity.

(*b*) whether it is a fact that the said resolutions are cancelled ;

(*c*) if so, when and by whom, under what rules the resolutions are treated as cancelled ?

*A.—Sri B. D. JATTI (Chief Minister).—

(*a*) Yes.

(*b*) and (*c*) It is not a fact that the said resolutions have been cancelled but the execution of the said resolutions has been suspended by the Deputy Commissioner, Belgaum, under his Order No. DDA/LBD, Dated 4th April 1961 (Belgaum) and No. DDB/LBD dated 27th March 1961 (Khanapur) in exercise of the powers vested in him under sub-section 1 of Section 200 of the Mysore Village Panchayats and Local Boards Act, 1959 read with Rule 6 of the Mysore Taluka